ಆಗಿದೆ. ಹಾಗೆ ಬಡ್ತಿ ಪಡೆದವರ ಪೈಕಿ ೮ ಜನ ಗ್ರಾಮ ಲೆಕ್ಕಿಗರಿಗೆ ಹಿಂಬಡ್ತಿ ನೀಡಲಾಗಿದೆ. ಹಿಂಬಡ್ತಿ ನೀಡಿದ ನಂತರ ಪುನರ್ ಪರಿಶೀಲನೆ ಮಾಡಿ ಯಾರಿಗೂ ಬಡ್ತಿ ನೀಡಿಲ್ಲ.

ಇ) ಜೇಷ್ಠತಾ ಪಟ್ಟಿಯಂತೆ ಬಡ್ತಿ ನೀಡಲಾಗುತ್ತಿದೆ.

ಈ) ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ೬ ಜನ ಗ್ರಾಮಲೆಕ್ಕಿಗರಿಗೆ ಬಡ್ತಿ ನೀಡಲಾಗಿದ್ದು ಎಲ್ಲರಿಗೂ ಹಿಂಬಡ್ತಿ ನೀಡಲಾಗಿದೆ. ಅದರಲ್ಲಿ ಒಬ್ಬರು ಮಾತ್ರ ಬಡ್ತಿ ನೀಡಿದ ವ್ಯಾಂದದಲ್ಲಿಯೇ ಕರ್ನಾಟಕ ಉಚ್ಚ ನ್ಯಾಯಾಲಯದ ತಡೆಯಾಜ್ಞೆಯಿಂದಾಗಿ ಮುಂದುವರಿಯುತ್ತಿದ್ದಾರೆ. ಪುನರ್‌ಪರಿಶೀಲನೆ ಮಾಡಿ ಬಡ್ತಿ ನೀಡಿರುವ ಯಾವ ಪ್ರಕರಣಗಳೂ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಪತಿಗಳೇ, ಕೆಲವರಿಗೆ ಟೆಂಪೊರರಿಯಾಗಿ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಪ್ರೊಮೋಷನ್ ಕೊಟ್ಟಿತ್ತು. ಅಲ್ಲಿ ಕೆಲಸ ಮುಗಿದ ಮೇಲೆ ಹಿಂಬಡ್ತಿಯಾಗಿದೆ. ಜೇಷ್ಠತಾ ಪಟ್ಟಿ ಪ್ರಕಾರ ಬಡ್ತಿ ಕೊಡಲಾಗುತ್ತದೆ.

ಪ್ರಶ್ನೆ ಸಂಖ್ಯೆ ೬೫೨ (೬೫೯)

ಸದಸ್ಯರು ಗೈರುಹಾಜರಾಗಿದ್ದರು

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ ೬೫೩ (೧೦೬) ರಾಮದಾಸ್ ಅವರೇ, ತಮ್ಮ ಪ್ರಶ್ನೆ ಮುಂದಕ್ಕೆ ಹೋಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ನನ್ನದೊಂದು ಪ್ರಶ್ನೆ ಇತ್ತು. ೬೫೨ನೇ ನಂಬರ್ ಪ್ರಶ್ನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದಕ್ಕೆ ಟೈಂ ಕೇಳಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಹೀಗೆಯೇ ನನ್ನ ನಾಲ್ಕೈದು ಪ್ರಶ್ನೆಗಳಿಗೂ ಟೈಂ ಕೇಳಿದ್ದೀರಿ ಜಾಗ್ರತೆ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಡೀ ರಾಜ್ಯದ್ದು ಅನೇಕ ವರ್ಷಗಳ ಮಾಹಿತಿ ಕೇಳಿದ್ದೀರಿ. ತರಿಸಿಕೊಡುತ್ತೇವೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ರೈತರಿಗೆ ಪರಿಹಾರ ಧನ ಸಹಾಯ

೧೪೧೩. ಶ್ರೀ ಶ್ರೀರಂಗದೇವರಾಯ (ಕನಕಗಿರಿ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗಂಗಾವತಿ, ಕುಷ್ಟಗಿ ಮತ್ತು ಸಿಂಧನೂರು ತಾಲ್ಲೂಕುಗಳಲ್ಲಿನ ಕೆರೆಗಳ ನಿರ್ಮಾಣಕ್ಕಾಗಿ ಸುಮಾರು ೨೫ ವರ್ಷಗಳ ಹಿಂದಿನಿಂದಲೂ ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರ ಧನ ಈವರೆಗೆ ಮುಟ್ಟದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಪರಿಹಾರ ಧನವನ್ನು ಕೊಡಿಸಲು ಏರ್ಪಾಡು ಮಾಡಲಾಗುವುದೆ?

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಹಾಗೂ ಯೋಜನಾ ಸಚಿವರು).—

ಅ) ಗಂಗಾವತಿ, ಕುಷ್ಟಗಿ ಮತ್ತು ಸಿಂಧನೂರು ತಾಲ್ಲೂಕುಗಳಲ್ಲಿ ಕೆರೆಗಳ ನಿರ್ಮಾಣಕ್ಕಾಗಿ ಸುಮಾರು ೨೫ ವರ್ಷಗಳ ಹಿಂದಿನಿಂದಲೂ ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರ ಧನ ಕೊಡುವಲ್ಲಿ ಯಾವುದೇ ಭೂಸ್ವಾಧೀನ ಪ್ರಕರಣಗಳು ಬಾಕಿ ಇರುವುದಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.